16. ವಿಷಯ : ಕಡೂರು ತಾಲ್ಲೂಕಿನ ಹಿರೇನಲ್ಲೂರು ಗ್ರಾಮದಲ್ಲಿ ಕುಡಿಯುವ ನೀರಿನ ಅಭಾವದ ಬಗ್ಗೆ

ಶ್ರೀ ಎನ್. ಕೆ. ಹುಚ್ಚಪ್ಪ (ಕಡೂರು).—ಕಡೂರು ತಾಲ್ಲೂಕಿನ ಹಿರೇನಲ್ಲೂರು ಹೋಬಳಿ ಆಸಂದಿ ಗ್ರಾಮದಲ್ಲಿ ಕುಡಿಯುವ ನೀರಿನ ಅಭಾವದ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತಿದ್ದೇನೆ. ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕೆಂದು ಹೋದ ವರ್ಷದಿಂದಲೂ ನಾವು ಕೇಳುತ್ತಿದ್ದರೂ ಮಾಡಿಲ್ಲ. ಮುಖ್ಯ ಮಂತ್ರಿಗಳು, ಸಂಬಂಧಪಟ್ಟ ಮಂತ್ರಿಗಳು ಮತ್ತು ಅಧಿಕಾರಿಗಳಲ್ಲಿ ಕೇಳಿಕೊಂಡರೂ ಕೂಡ ಏನೂ ಪ್ರಯೋಜನವಾಗಿಲ್ಲ. ಮಾನ್ಯ ಮಂತ್ರಿಗಳು ತಕ್ಷಣ ರಿಗ್‌ಯಂತ್ರಗಳನ್ನು ಕಳುಹಿಸಿ ತುರ್ತಾಗಿ ಕುಡಿಯುವ ನೀರಿನ ವ್ಯವಸ್ಥೆ ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಘನ ಸರ್ಕಾರದವರು ನೀರನ್ನು ಜನರಿಗೆ ಸ್ವೀಚ್ಪ್ ಯಾಗಿ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಆದರೆ ನಮ್ಮ ತಾಲ್ಲೂಕನ್ನು ಮಾತ್ರ ಬಿಟ್ಟಿದ್ದಾರೆ. ಆದ್ದರಿಂದ ದಯಮಾಡಿ ಈ ಬಗ್ಗೆ ಗಮನ ಹರಿಸಿ ವ್ಯವಸ್ಥೆ ಮಾಡಿಸಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ನೀರಿನ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಮಂತ್ರಿಗಳಾದ ನಜೀರ್ ಸಾಬ್ ಅವರಿಗೆ ಹೇಳಿ ರಿಗ್‌ಗಳನ್ನು ಕಳುಹಿಸಬಹುದು. ಆದರೆ ನೀರು ಸಿಗಬೇಕಲ್ಲ ? ಮಾನ್ಯ ಸದಸ್ಯರು ನಜೀರ್ ಸಾಬ್ ಅವರನ್ನು ಕಂಡು ತಕ್ಷಣ ಸಹಾಯ ಪಡೆಯಿರಿ ಎಂದು ಹೇಳುತ್ತೇನೆ.

17. ವಿಷಯ : ರಾಯಚೂರಿನ ಸಹಕಾರಿ ಹತ್ತಿನೂಲಿನ ಗಿರಣಿ ನೌಕರರ ಮುಷ್ಕರದ ಬಗ್ಗೆ

ಡಾ। ಸಂಗಮೇಶ್ವರ ಸರದಾರ್ (ರಾಯಚೂರು).—ಮಾನ್ಯ ಅಧ್ಯಕ್ಷರೆ, ರಾಯಚೂರು ಸಹಕಾರಿ ನೂಲಿನ ಗಿರಣಿಯ ಕಾರ್ಮಿಕರು ಐದಾರು ದಿನಗಳಿಂದ ಸಂಪು ಹೂಡಿದ್ದಾರೆ. ಕಾರಣ ಅಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರಿಗೆ ಕೊಡತಕ್ಕ ಗ್ರಾಚುಯಿಟಿ ಮುಂತಾದ ಸೌಲಭ್ಯಗಳನ್ನು ಕೊಡುವುದಿಲ್ಲ ಎಂದು ಹೇಳಿದ್ದರಿಂದ ಸಂಪು ಹೂಡಿದ್ದಾರೆ. ಮಾನ್ಯ ಮಂತ್ರಿಗಳು ಈ ಬಗ್ಗೆ ಗಮನ ಹರಿಸಿ ಗಿರಣಿ ಕಾರ್ಮಿಕರು ಕೆಲಸದ ಮೇಲೆ ಹೋಗುವಂತೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಸೂರ್ಯನಾರಾಯಣ ರಾವ್.—ರಾಯಚೂರು ಬಹಳ ಹಿಂದುಳಿದ ಪ್ರದೇಶ. ಅಲ್ಲಿ ಕಾರ್ಮಿಕರು ಅವರ ಬೇಡಿಕೆಗಳಿಗಾಗಿ ಹೋರಾಟ ಮಾಡಿ ಹೊರಗೆ ಇದ್ದಾರೆ. ಆದ್ದರಿಂದ ಸರ್ಕಾರದವರು ಕೂಡಲೇ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ಇದು ಕಾರ್ಮಿಕ ಇಲಾಖೆಗೆ ಸಂಬಂಧಿಸಿದ ವಿಷಯ. ಪರಿಸ್ಥಿತಿಯನ್ನು ಅರಿತುಕೊಂಡು ಸಮಸ್ಯೆಯನ್ನು ಬಿಡಿಸುವುದಕ್ಕಾಗುತ್ತದೆಯೆ, ಕನ್‌ಸಿಲಿಯೇಷನ್, ನೆಗೋಷಿಯೇಷನ್ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಎಂಬ ಬಗ್ಗೆ ಅದರ ಸಾಧ್ಯಾಸಾಧ್ಯತೆಗಳ ಬಗ್ಗೆ ವಿಚಾರಿಸುತ್ತೇನೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ನಾಳೆ ಹೇಳಿ.

ಶ್ರೀ ಎ. ಲಕ್ಷ್ಮೀಸಾಗರ್.—ರಾಯಚೂರು ದೂರದಲ್ಲಿದೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಡಿಪಾರ್ಟ್‌ಮೆಂಟ್ ಇಲ್ಲೇ ಇದೆಯಲ್ಲ.

18. ವಿಷಯ : ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ನಡೆದಿರುವ ಮೂರು ಕೊಲೆಗಳ ಬಗ್ಗೆ ತನಿಖೆನಡೆಸಿ ಅಪರಾಧಿಗಳನ್ನು ಪತ್ತೆ ಹಚ್ಚುವಲ್ಲಿ ಉಂಟಾಗಿರುವ ವಿಫಲತೆಯ ಬಗ್ಗೆ

ಶ್ರೀ ಕೆ. ಎಸ್. ಕಾಳಮರಿಗೌಡ (ಪಿರಿಯಾಪಟ್ಟಣ).— ಮಾನ ಅಧ್ಯಕ್ಷರೆ, ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ 15 ದಿವಸಗಳಲ್ಲಿ ಮೂರು ಕೊಲೆಯಾಗಿದೆ. ಕಿರ್ನಹಳ್ಳಿಯಲ್ಲಿ ಒಂದು ಕೊಲೆ, ಬುವನಹಳ್ಳಿಯಲ್ಲಿ ಒಂಡು ಕೊಲೆ ಮತ್ತು ಬೈಲಕುಪ್ಪೆಯಲ್ಲಿ ಒಂದು ಕೊಲೆ ಆಗಿದೆ. ಇದ್ದಕ್ಕಿದ್ದಹಾಗೆ ರಾತ್ರಿ 12 ಗಂಟೆಯಲ್ಲಿ ಕೋಳಿ ಕೇಳುವುದಕ್ಕೆ ಬಂದವನು ಕೊಲೆ ಮಾಡಿದ್ದಾನೆ. ಕೊಲೆ ಮಾಡಿದವನು ಯಾರು ಎಂದು ಗೊತ್ತಾದರೂ ಪೋಲೀಸರು ಹಿಡಿದು ತನಿಖೆಮಾಡುವ ವ್ಯವಸ್ಥೆ ಮಾಡಿಲ್ಲ. ಅದೇ ರೀತಿ ಬುವನಹಳ್ಳಿಯಲ್ಲಿ ಕೊಲೆಯಾಗಿದೆ. ಕೊಲೆ ಮಾಡಿದವರು ಯಾರು ಎಂಬುದು ಗೊತ್ತಾಗಿದ್ದರೂ ಹಿಡಿದಿಲ್ಲ. ಬೈಲಕುಪ್ಪೆಯಲ್ಲಿ ಟ್ಯಾಕ್ಸಿ ಡ್ರೈವರ್ ಆಗಿದ್ದವನನೊಬ್ಬನನ್ನು ಕೊಲೆ ಮಾಡಿದ್ದಾರೆ. ಟಿಬೆಟಿಯನ್ಸ್ ಕೊಲೆ ಮಾಡಿದ್ದಾರೆ ಎಂಬುದಾಗಿ ಹೇಳುತ್ತಿದ್ದಾರೆ. ಅಲ್ಲಿ 10-15 ಸಾವಿರ ಟಿಬೆಟಿಯನ್ಸ್ ಕೆಲಸಮಾಡುತ್ತಿದ್ದಾರೆ. ಮಧ್ಯಾಹ್ನ 12 ಗಂಟೆಗೆ ಕಪಾಳಕ್ಕೆ ಹೊಡೆದು, ಎದೆಗೆ ಹೊಡೆದು ಕೊಲೆಮಾಡಿದ್ದಾರೆ ಎಂಬ

ಮಾತು ಇದೆ. ಯಾರು ಯಾರನ್ನು ಕೊಲೆಮಾಡಿದ್ದಾರೆ ಎಂಬುದನ್ನು ಇನ್ನೂ ಪತ್ತೆಹಚ್ಚಿಲ್ಲ. ಪೊಲೀಸ್ ಇಲಾಖೆಯವರು ಕ್ರಮ ತೆಗೆದುಕೊಂಡಿಲ್ಲ. 15 ದಿವಸವಾದರೂ ಕ್ರಮ ತೆಗೆದುಕೊಂಡಿಲ್ಲ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೋ ? ಅಥವಾ ಯಾರು ಉತ್ತರ ಕೊಡುತ್ತಾರೆ ?

ಶ್ರೀ ಎ. ಲಕ್ಷ್ಮೀಸಾಗರ್.— 15 ದಿವಸಗಳಲ್ಲಿ ಮೂರು ಕೊಲೆಗಳಾಗಿವೆಯೆಂದು ಹೇಳಿದ್ದಾರೆ. ಪೋಲೀಸರು ಯಾವ ಕ್ರಮವನ್ನೂ ಕೈಗೊಂಡಿಲ್ಲ ಎಂಬ ಮಾತನ್ನು ಹೇಳಿದ್ದಾರೆ. ವಸ್ತುಸ್ಥಿತಿ ಏನಾಗಿದೆ ಅವರ ಹತ್ತಿರ ಕಂಪ್ಲೇಂಟ್ ಹೋಗಿದೆಯೇ ಇಲ್ಲವೇ ಎಂಬುದನ್ನು ತಿಳಿದುಕೊಂಡು....

ಶ್ರೀ ಕೆ. ಎನ್. ಕಾಳಮರಿಗೌಡ.— ಹಾಗೆ ಹೇಳಿದರೆ ಹೇಗೆ ? ಮೂರು ಕೊಲೆಯಾಗಿದೆ.

ಶ್ರೀ ಎ. ಲಕ್ಷ್ಮೀಸಾಗರ್ — ನಾನು ಹೇಳುವುದನ್ನು ಮೊದಲು ಕೇಳಿ. ಅವರ ಆತಂಕ ನನಗೆ ಅರ್ಥವಾಗಿದೆ. ಪೋಲೀಸರು ನಿದ್ದೆ ಮಾಡುತ್ತಿದ್ದಾರೆ, ಏನೂಕ್ರಮ ತೆಗೆದುಕೊಂಡಿಲ್ಲ, ಊರಿಗೆಲ್ಲಾ ಗೊತ್ತಾಗಿದ್ದರೂ ಪೋಲೀಸರು ಸುಮ್ಮನೆ ಕುಳಿತಿದ್ದಾರೆ ಎಂದು ಹೇಳಿದ್ದಾರೆ. ತಕ್ಷಣ ಮೈಸೂರು ಎಸ್. ಪಿ. ಅವರಿಗೆ ತಿಳಿಸಿ ಇನ್‌ವೆಸ್ಟಿಗೇಷನ್ ತೀವ್ರಗೊಳಿಸಿ ತಪ್ಪಿತಸ್ಥರನ್ನು ಹಿಡಿದು ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಲಿಕ್ಕೆ ಆದೇಶ ಕೊಡುತ್ತೇನೆ.

ಶ್ರೀ ಕೆ. ಎಸ್. ಕಾಳಮರಿಗೌಡ.— ಮೂರು ಕಡೆ ಅಪರಾಧಿಗಳು ಯಾರು ಎಂಬುದು ಗೊತ್ತಾಗಿದೆ. ಮೂರು ಜನರೂ ತಪ್ಪಿಸಿಕೊಂಡಿದ್ದಾರೆ. ಒಬ್ಬರೂ ಸಿಕ್ಕಿಲ್ಲ.

ಉಪಾಧ್ಯಕ್ಷರು.— ಎಸ್.ಪಿ.ಯವರಿಗೆ ಹೇಳುತ್ತೇನೆ ಎಂದು ಹೇಳಿದ್ದಾರಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.— ಕಾನೂನು ತಿಳಿವಳಿಕೆ ಕಾಳಮರಿಗೌಡರಿಗೆ ಸ್ವಲ್ಪಮಟ್ಟಿಗೆ ಇದೆ. ನನಗೆ ಅವರು ಪರ್ಸನಲ್ಲಾಗಿ ಗೊತ್ತಿದೆ. ಅವರು ನಮ್ಮ ಪಕ್ಷದಲ್ಲಿದ್ದವರಲ್ಲವೆ ? ಕೊಲೆ ಮಾಡಿದವನು ತಲೆ ತಪ್ಪಿಸಿಕೊಂಡು ಹೋದರೆ 15 ದಿವಸದಲ್ಲಿ ಹಿಡಿಯಬಹುದು, ಒಂದು ತಿಂಗಳಲ್ಲಿ ಹಿಡಿಯಬಹುದು ಎರಡು ತಿಂಗಳಲ್ಲಿ ಹಿಡಿಯಬಹುದು. ಕಾನೂನಿನಲ್ಲಿ ಒಂದು ಗಾದೆ ಉಂಟು, "The arm of law is too long", ಎಂದು. ಒಂದೊಂದು ಸಾರಿ ಕೈಗೆ ಸಿಗುವುದಿಲ್ಲ. ಏನಾದರೂ ಮಾಡಿ ಹಿಡಿಯುತ್ತೇವೆ. ಪಾತಾಳದಲ್ಲಿದ್ದರೂ ಹಿಡಿಯುತ್ತೇವೆ.

19. ವಿಷಯ : ಮಂಗಳೂರಿನ ಸಾರಿಗೆ ಅಧಿಕಾರಿಗಳ ಈಚಿನ ನಡವಳಿಕೆಗಳಿಂದ ವ್ಯಾನ್ ಹಾಗೂ ಇತರ ವಾಹನಗಳ ಮಾಲೀಕರಿಗೆ ಉಂಟಾಗಿರುವ ತೊಂದರೆಗಳ ಬಗ್ಗೆ.

ಡಾ. ವಿ. ಎಸ್. ಆಚಾರ್ಯ (ಉಡುಪಿ).— ಸನ್ಮಾನ್ಯ ಅಧ್ಯಕ್ಷರೆ, ಹೊಸ ಸಮಸ್ಯೆ ನಮ್ಮಲ್ಲಿ ಬಂದಿದೆ. ಮಾನ್ಯ ಸಾರಿಗೆ ಮಂತ್ರಿಗಳು ಈ ಬಗ್ಗೆ ಗಮನ ಕೊಡಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಮತ್ತು ಸಣ್ಣ ಪುಟ್ಟ ಪಟ್ಟಣಗಳಲ್ಲಿ ಸಾರಿಗೆ ವ್ಯವಸ್ಥೆಗೆ ಮೆಟಾಡಾರ್ ವ್ಯಾನ್ ಮತ್ತು ಸ್ಟ್ಯಾಂಡರ್ಡ್ ವ್ಯಾನ್ ಬಳಕೆಯಲ್ಲಿದೆ. ಇದರ ಅವಶ್ಯಕತೆ ಅಲ್ಲಿ ಹೆಚ್ಚಾಗಿದೆ. ಬಸ್ ಸೌಕರ್ಯ ಇಲ್ಲದ ಕಡೆ ಇದು ಹೆಚ್ಚಾಗಿ ಬಳಕೆಯಲ್ಲಿದೆ. ದಕ್ಷಿಣ ರಾಜ್ಯಗಳಾದ ಮದ್ರಾಸ್, ಆಂಧ್ರ ಮತ್ತು ಕೇರಳದಲ್ಲಿ ಈ ವ್ಯಾನ್‌ಗಳಲ್ಲಿ 12+1=13 ಜನ ಕುಳಿತುಕೊಳ್ಳುವ ಅವಕಾಶವಿದೆ. ನಮ್ಮ ರಾಜ್ಯದಲ್ಲಿ ಮಾತ್ರ 6+1=7 ಜನರಿಗೆ ಅವಕಾಶ ಮಾಡಿಕೊಟ್ಟಿದ್ದಾರೆ. ವ್ಯಾನನ್ನು ತಯಾರಿಸಿರುವ ಕಂಪೆನಿ ಡಿಜೈನೇ 13 ಜನರಿಗೆ ಅವಕಾಶ ವಾಗುವಂತೆ ಮಾಡಿದ್ದಾರೆ. ಆದರೂ ನಮ್ಮಲ್ಲಿ 7 ಜನರಿಗೆ ಮಾತ್ರ ಅವಕಾಶ ಮಾಡಿಕೊಟ್ಟಿದ್ದಾರೆ. ಇದರಿಂದಾಗಿ ಈ ಉದ್ಯಮ ಮಾಡುವವರಿಗೆ ತೊಂದರೆಯಾಗಿದ್ದು ಲಂಚದ ಹಾವಳಿ ಹೆಚ್ಚಾಗಿದೆ. ಮಾನ್ಯ ಮಂತ್ರಿಗಳಿಗೆ ನಾನು ಇದರ ಬಗ್ಗೆ ಹೇಳಿದ್ದೇನೆ. 13 ಜನ ವ್ಯಾನ್‌ಗಳಲ್ಲಿ ಕುಳಿತುಕೊಳ್ಳುವುದಕ್ಕೆ ಅವ ಕಾಶ ಮಾಡಿಕೊಡಬೇಕೆಂದು ಕೇಳಿಕೊಂಡಿದ್ದೇನೆ. ಮಂಗಳೂರಿನಿಂದ ನನಗೆ ಸುದ್ದಿ ಬಂದಿದೆ. 6 ಸೀಟು ಗಳನ್ನು ಮಾತ್ರ ಹಾಕಬೇಕು, ಹೆಡ್‌ರೆಸ್ಟ್ ಹಾಕಬೇಕು ಎಂದು ಪೋಲೀಸರು ಒತ್ತಾಯ ಮಾಡುತ್ತಿದ್ದಾರಂತೆ. ಸ್ವಂತ ಉದ್ಯೋಗ ಮಾಡುವ ಬಡಪಾಯಿಗಳಿಗೆ ಇದಕ್ಕೆ 7–8 ಸಾವಿರ ರೂಪಾಯಿ ಖರ್ಚು ಮಾಡಬೇಕಾದ ಪರಿಸ್ಥಿತಿ ಬಂದಿದೆ. ಲೈಟ್ ಟ್ರಾನ್ಸ್‌ಪೋರ್ಟ್ ವೆಹಿಕಲ್‌ನಲ್ಲಿ 12 ಜನರನ್ನು ಹಾಕುವು ದಕ್ಕೆ ಅವಕಾಶವಿದ್ದರೂ ಈ ರೀತಿ ತೊಂದರೆ ಕೊಡುತ್ತಿರುವುದನ್ನು ತಪ್ಪಿಸಬೇಕು. ವರ್ತಮಾನ ಪತ್ರಿಕೆ ಯಲ್ಲೂ ಈ ಬಗ್ಗೆ ಸುದ್ದಿ ಬಂದಿದೆ. ಈಗಿನ ವ್ಯವಸ್ಥೆಯಿಂದ ಬಡಪಾಯಿಗಳು ಕೆಲಸ ಕಳೆದುಕೊಳ್ಳು ವುದು ಮಾತ್ರವಲ್ಲದೆ ಭ್ರಷ್ಟಾಚಾರಕ್ಕೂ ಕಾರಣವಾಗಿದೆ. ಸರ್ಕಾರ ಈ ಬಗ್ಗೆ ಗಮನಹರಿಸಿ ತುರ್ತು ಆದೇಶವನ್ನು ಕೊಟ್ಟು ಸಮಸ್ಯೆಯನ್ನು ಬಗೆಹರಿಸಬೇಕಾಗಿ ಕೇಳಿಕೊಳ್ಳುತ್ತೇನೆ.

2-00 p.m.

ಶ್ರೀ ಎಂ. ಪಿ. ಪ್ರಕಾಶ್ (ಸಾರಿಗೆ ರಾಜ್ಯ ಮಂತ್ರಿಗಳು).— ಸನ್ಮಾನ್ಯ ಅಧ್ಯಕ್ಷರೇ, ಈ ವಿಚಾರದ ಬಗ್ಗೆ ಹಿಂದಿನ ಸರ್ಕಾರದವರು ಈ ಸ್ಟ್ಯಾಂಡರ್ಡ್ ವ್ಯಾನ್‌ಗಳಲ್ಲಿ 6 ಪ್ಲಸ್ 1 ರೀತಿಯ ಸೀಟ್ ಇರಬೇ ಕೆಂದು ಮಾಡಿತ್ತು. ಹಾಗೂ ಇದನ್ನು 12 ಪ್ಲಸ್ 1 ರೀತಿ ಸೀಟ್‌ಗಳಿಗೆ ಅವಕಾಶ ಮಾಡಿಕೊಡುವ ಬಗ್ಗೆ ಸಂಬಂಧಪಟ್ಟ ಕಾಯ್ದೆಯಲ್ಲಿ ತಿದ್ದುಪಡಿ ಆಗಬೇಕಾಗಿದೆ. ಈ ಬಗ್ಗೆ ಸರ್ಕಾರದ ಮಟ್ಟದಲ್ಲಿ ಇದು